**P.W-2**

**ದಿನಾಂಕಃ 03-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಎನ್ ವಿ ಸಿ ವಕೀಲರಿಂದಃ**

1. ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ. ನನ್ನ ಸ್ವಂತ ಊರು ಮೇಡ್ಲೇರಿ ತಾಂಡಾ. ಮೇಡ್ಲೆರಿ ತಾಂಡಾ ದಿಂದ ಚನ್ನಪುರಾ ತಾಂಡಾ 15 ರಿಂದ 20 ಕಿ ಮಿ ಇದೆ. ಚನ್ನಪುರ ತಾಂಡಾದಲ್ಲಿ ಮನೆ ಮತ್ತು ಖಾಲಿ ಜಾಗ ಇಲ್ಲ. ನನಗೆ ಸಂಬಂಧಿಸಿದ ಆದಾರ ಕಾರ್ಡ ಮತ್ತು ಇತರ ಗುರುತಿನ ಚೀಟಿಗಳು ಮೇಡ್ಲೇರಿ ತಾಂಡಾಕ್ಕೆ ಸಂಬಂಧಿಸಿದ್ದು ಇವೆ . ನಾನು ಶಾಲೆ ಕಲಿತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ಕನ್ನಡ ಭಾಷೆಯಲ್ಲಿ ತಯಾರಿಸಲಾಗಿದೆ. ಅದು ಆಂಗ್ಲ ಭಾಷೆಯಲ್ಲಿ ಇದ್ದು ಅದು ಕನ್ನಡ ಬಾಷೆಯಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಯಾರು ಯಾರ ವಿರುದ್ದ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ನನ್ನ ಅಳಿಯನ ಹೆಸರು ಮಹಾದೇವಪ್ಪ. ಆತ 4 ನೇ ವಾದಿ ಆಗಿರುತ್ತಾನೆ. 4 ವಾದಿಗೆ ನನ್ನ ಮಗಳನ್ನು ಮದುವೆ ಮಾಡಿ ಕೊಡಲಾಗಿದೆ. ವಾದಿಯರ ಮನೆತನದ ಬಗ್ಗೆ ನನ್ನ ಮಗಳ ಮದುವೆಕ್ಕಿಂತ ಪೂರ್ವದಲ್ಲಿ ಈ ವಿಷಯ ನನಗೆ ಗೊತ್ತಿರಲಿಲ್ಲ. ನನ್ನ ನಾದೀನಿ ಸೋನವ್ವ ಇವಳಿಗೆ ರಾಮಪ್ಪನ ಜೊತೆ ಮದುವೆ ಮಾಡಿಕೊಡಲಾಗಿತ್ತು. ನನಗೆ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ದಾವಾ ಆಸ್ತಿಯನ್ನು ನೋಡಿರುವುದಿಲ್ಲ. ನನಗೆ ದಾವಾ ಆಸ್ತಿಯ ಚಕ್ಕುಬಂದಿ ಗೊತ್ತಿಲ್ಲ. ನನ್ನ ಸಾಕ್ಷಿ ಬರೆದ ವಿಷಯ 4 ನೇ ವಾದಿ ಹೇಳಿ ಬರೆಸಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಆಸ್ತಿ ರಾಮಪ್ಪನಿಗೆ ಯಾವಾಗ ಬಂತು ಎಂದು ದಿನಾಂಕ ಹೇಳಲು

ಬರುವುದಿಲ್ಲ. ನಾನು ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ನೋಡಿರುವುದಿಲ್ಲ. ದಾವಾ ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಯರು ಮಾತ್ರ ಸ್ವಾದೀನದಲ್ಲಿ ಇದ್ದು ಉಪಬೋಗ ಮಾಡುತ್ತಾರೆ ಎಂದರೆ ನಿಜ. ದಾವಾ ಆಸ್ತಿ ಎಷ್ಟು ಬಂದಿದೆ ಎಂದು ನನಗೆ ಗೊತ್ತು. 5 ಎಕರೆ ಮಾತ್ರ ಬಂದಿದೆ ಎಂದು ಹೇಳುತ್ತಾರೆ. ನನಗೆ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಯ ತೆರಿಗೆಯನ್ನು ಪ್ರತಿವಾದಿ ನಂ. 1 ಮತ್ತು 2 ರವರು ತುಂಬುತ್ತಾ ಬಂದಿರರುತ್ತಾರೆ ಎಂದರೆ ನಿಜ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮಪ್ಪ ಕುಡಿತಿದ್ದ ಮತ್ತು ತನ್ನ ಚಟಗಳಿಗೆ ಬಲಿಯಾಗಿದ್ದ ಎಂದು ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಪ್ರತಿವಾದಿ ನಂ. 1 ಮತ್ತು 2 ಇವರು ದಬ್ಬಾಳಿಕೆಯಿಂದಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.